'ನೂತನ ಮಾಹಿತಿ ತಂತ್ರಜ್ಞಾನ ಕಾರ್ಯನೀತಿ 2020–25' ಕ್ಕೆ ರಾಜ್ಯ ಸಚಿವ ಸಂಪುಟ ಸಭೆ ಒಪ್ಪಿಗೆ

60 ಲಕ್ಷ ಉದ್ಯೋಗ ಸೃಷ್ಟಿ ಗುರಿ

4-9-2020

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಐದು ವರ್ಷಗಳಲ್ಲಿ ಸುಮಾರು 60 ಲಕ್ಷ ಉದ್ಯೋಗ ಸೃಷ್ಟಿಸುವ 'ನೂತನ ಮಾಹಿತಿ ತಂತ್ರಜ್ಞಾನ ಕಾರ್ಯನೀತಿ 2020-25' ಕ್ಕೆ ರಾಜ್ಯ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಅಲ್ಲದೆ, ಈ ಅವಧಿಯಲ್ಲಿ ದೇಶದ ಡಿಜಿಟಲ್ ಆರ್ಥಿಕತೆಯಲ್ಲಿ (1 ಟ್ರಿಲಿಯನ್ ಡಾಲರ್) ಕರ್ನಾಟಕದ ಪಾಲು ಶೇ 30 ರಷ್ಟು ಆಗಿರಬೇಕು ಎಂಬ ಗುರಿಯನ್ನೂ ಈ ನೀತಿ ಹೊಂದಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, ಸಂಪುಟ ಸಭೆ ಬಳಿಕ ತಿಳಿಸಿದರು.

ಐಟಿ, ಐಟಿ ಸೇವೆ, ನಾವಿನ್ಯತೆ, ತಂತ್ರಜ್ಞಾನದಲ್ಲಿ ಕರ್ನಾಟಕ ತನ್ನ ನಾಯಕತ್ವದ ಸ್ಥಾನ ಖಚಿತಪಡಿಸುವ ಗುರಿ ಹೊಂದಿದೆ. ಸುರಕ್ಷಿತ, ಸರ್ವಾಂಗೀಣ ಆರ್ಥಿಕ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಇದರ ಪರಿಣಾಮ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ 60 ಲಕ್ಷ ಉದ್ಯೋಗಗಳು ಸೃಷ್ಟಿ ಆಗುತ್ತವೆ. ಹೊಸ ಹೊಸ ಕ್ಷೇತ್ರಗಳಲ್ಲೂ ಮಾಹಿತಿ ತಂತ್ರಜ್ಞಾನದ ಬಳಕೆ ಆಗುತ್ತದೆ ಎಂದು ಹೇಳಿದರು.

ರಿಯಾಯ್ತಿ, ಪ್ರೋತ್ಸಾಹ ಧನ: ಐಟಿ ಹಬ್/ಕ್ಲಸ್ಟರ್‌ಗಳನ್ನು ವಲಯ 3 ರಿಂದ ಹೊರಗೆ ಸ್ಥಾಪಿಸುವವರಿಗೆ ₹ 3 ಕೋಟಿ, ಒಟ್ಟಿಗೆ ಕೆಲಸ ಮಾಡುವ ಜಾಗ ಮತ್ತು ಮೂಲ ಸೌಕರ್ಯಗಳ ನಿರ್ಮಾಣ ಮಾಡುವವರಿಗೆ ₹2 ಕೋಟಿ ವರೆಗೆ ಹಣಕಾಸು ನೆರವು ನೀಡಲಾಗುವುದು.

ವಲಯ 3 ರ ಹೊರಗಿನವರಿಗೆ ಲೀಸ್ ಅಥವಾ ಬಾಡಿಗೆ ಹಣವನ್ನು ಸುರುಪಾವತಿ ಮಾಡಲಾಗುತ್ತದೆ. ₹3 ಲಕ್ಷದಿಂದ ₹6 ಲಕ್ಷದವರೆಗೆ ಮರುಪಾವತಿ ಮಾಡಲಾಗುತ್ತದೆ. ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರಿನಲ್ಲಿ ಉದ್ಯಮ ಸ್ಥಾಪಿಸುವವರಿಗೆ ಶೇ 75 ರಷ್ಟು ಮತ್ತು ಉಳಿದ ಕಡೆಗಳಲ್ಲಿ (ಬೆಂಗಳೂರು ಹೊರತುಪಡಿಸಿ) ಉದ್ಯಮ ಸ್ಥಾಪಿಸುವವರಿಗೆ ಶೇ 100 ಸ್ಟಾಂಪ್ ಡ್ಯೂಟಿ ವಿನಾಯಿತಿ ನೀಡುವುದೂ ಸೇರಿದಂತೆ ಹಲವು ಪ್ರೋತ್ಸಾಹ ಧನ ಮತ್ತು ರಿಯಾಯ್ತಿಗಳನ್ನು ನೀತಿಯಲ್ಲಿ ಪ್ರಕಟಿಸಲಾಗಿದೆ.

ಎಲೆಕ್ಟ್ರಾನಿಕ್ಸ್–ಸೆಮಿಕಂಡಕ್ಟರ್ ಉತ್ಪಾದನೆ

ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ಉಪಕರಣಗಳ ಉತ್ಪಾದನೆಯ ಉದ್ಯಮಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಲು ಹಲವು ರಿಯಾಯ್ತಿಗಳನ್ನು ಪ್ರಕಟಿಸಲಾಗಿದೆ. ಈ ಕ್ಷೇತ್ರದಲ್ಲಿ ಬಂಡವಾಳ ಹೂಡುವವರಿಗೆ ಭೂಮಿ ಖರೀದಿಗೆ ಶೇ 25 ಮತ್ತು ಘಟಕಗಳ ಸ್ಥಾಪನೆ ಹಾಗೂ ಯಂತ್ರೋಪಕರಣಗಳ ಖರೀದಿಗೆ ಶೇ 20 ರಷ್ಟು ಸಬ್ಸಿಡಿ ನೀಡಲಾಗುವುದು ಎಂದು ಮಾಧುಸ್ವಾಮಿ ತಿಳಿಸಿದರು.

ಮುದ್ರಾಂಕ ಮತ್ತು ನೋಂದಣಿ ಶುಲ್ಕ ಪಾವತಿಯನ್ನು ಶೇ 100 ರಷ್ಟು, ಭೂಪರಿವರ್ತನೆ ಶುಲ್ಕ ಶೇ 100 ರಷ್ಟು ಹಿಂದಿರುಗಿಸಲಾಗುವುದು. ವಿದ್ಯುತ್ ದರ ಪ್ರತಿ ಯುನಿಟ್ ಮೇಲೆ ₹1 ರಿಯಾಯ್ತಿ ನೀಡಲಾಗುವುದು. ಉದ್ಯಮ ಕಾರ್ಯಾರಂಭ ಮಾಡಿದ ದಿನದಿಂದ 5 ವರ್ಷಗಳವರೆಗೆ ಈ ಪ್ರಯೋಜನ ಸಿಗಲಿದೆ ಎಂದು ಅವರು ವಿವರಿಸಿದರು.

ಈ ಕ್ಷೇತ್ರದಲ್ಲಿ ಸುಮಾರು 40 ಸಾವಿರ ಉದ್ಯೋಗಗಳನ್ನು ಸೃಷ್ಟಿಸುವ ಗುರಿ ಹೊಂದಲಾಗಿದೆ ಎಂದೂ ಅವರು ಹೇಳಿದರು.